# ಆವೇಗ

■ ಎಚ್.ಕೆ. ಶರತ್

ವಸ ಎಂದಿನಂತೆ ಅಂದಿನ ಸಂಜೆಯೂ ಆಫೀಸಿನಿಂದ ಮನೆಗೆ ಬಂದವನೇ ಫಾರ್ಮಲ್ಸ್ ಕಳಚಿ ಟ್ರ್ಯಾಕ್ ಪ್ಯಾಂಟು, ಟಿ ಶರ್ಟ್ ಮೈಗಾನಿಸಿಕೊಂಡು, ನಗರದಂಚಿನ ಊರ ಕೆರೆಗೆ ಒರಗಿಕೊಂಡಿರುವ ಪಾರ್ಕ್‌ನತ್ತ ನಡೆಯಲಾರಂಭಿಸಿದ. ನಡಿಗೆಯ ಹಾದಿಯಲ್ಲಿ ಹರಡಿಕೊಳ್ಳುವ ಬದುಕಿನ ಚಿತ್ರಗಳಿಗೆ ಕಣ್ಣಾಗುತ್ತಲೇ ಪಾರ್ಕ್‌ನ ಒಡಲೊಳಗೆ ಜಮೆಯಾದ. ಅಪರಿಚಿತ ಮುಖಗಳು ಎದುರಾದಾಗಲೆಲ್ಲ ಸಹಜವಾಗಿಯೇ ಇರುತ್ತಿದ್ದ ಅವನ ಮೈ ಮನಸ್ಸು, ಪರಿಚಿತ ಮುಖಕ್ಕೆ ಒಡ್ಡಿಕೊಂಡ ಕೂಡಲೇ ಅಂಜಿಕೆಯಿಂದ ಮುದುಡಿಕೊಳ್ಳುತ್ತಿದ್ದದ್ದು ಅವನಿಗೆ ಕಿರಿಕಿರಿ ಉಂಟು ಮಾಡುತ್ತಿದ್ದರೂ, ಅದರಿಂದ ಹೊರಬರಲು ಅದುವರೆಗೂ ನಡೆಸಿದ ಪ್ರಯತ್ನಗಳು ಕೈ ಹಿಡಿದಿರಲಿಲ್ಲ.

ತನ್ನ ನಡಿಗೆಯ ಹಾದಿಯಲ್ಲಿ ಎದುರಾಗುವ ಮುಖಗಳೆಲ್ಲವೂ ಅಪರಿಚಿತವಾಗಿಯೇ ಇರಲಪ್ಪ ಎನ್ನುವ ಆಶಯದೊಂದಿಗೆ ಬಿರುಸಾಗಿ ನಡೆಯುತ್ತಿದ್ದ ಅವನಿಗೆ, ನಿರೀಕ್ಷೆಯಂತೆಯೇ ಪ್ರತಿ ದಿನವೂ ಮುಖಾಮುಖಿಯಾಗುತ್ತಿದ್ದ ತನ್ನಪ್ಪನ ಸ್ನೇಹಿತನೆಂಬ ಸಂಬಂಧವುಳ್ಳ ಮುಖ, ದೊಡ್ಡದೊಂದು ನಗೆ ಬಿಸಾಕಿ ಓಡು ಶುರು ಓಡು ಎಂಬ ಮಾತು ಕಿವಿಗಾಕಿ ನಿರ್ಗಮಿಸಿತು.

ತಾನು ಈ ಪಾರ್ಕ್‌ನಲ್ಲಿ ನಡೆಯಲು ಆರಂಭಿಸಿದಾಗಿನಿಂದಲೂ ಎದುರು ಬದುರಾಗುತ್ತಿದ್ದ ಈ ಆಸಾಮಿ, ಮೊದಲೆಲ್ಲ ಸುಮ್ಮನೆ ಸ್ಮೈಲ್ ಕೊಟ್ಟು ಸಾಗುತ್ತಿದ್ದದ್ದು, ಕಳೆದ ಎರಡ್ಮೂರು ದಿನಗಳಿಂದ ದಿನಕ್ಕೊಂದು ಸಲಹೆ ನೀಡಲಾರಂಭಿಸಿರುವುದನ್ನು ಕಂಡು ಅವನ ಮನದೊಳಗೆ ಅಸಹನೆಯ ಕುಡಿಯೊಂದು ಚಿಗುರಲಾರಂಭಿಸಿತು.

ಮೊನ್ನೆ ಸಿಕ್ಕಾಗ ಸ್ವಿಮ್ಮಿಂಗಿಗೆ ಹೋಗು ಶುರು ಅಂದದ್ದು, ನಿನ್ನೆ ಜಿಮ್ಗೆ ಹೋಗು ಶುರು ಎಂದು ವಿಚಿತ್ರವಾಗಿ ನಕ್ಕಿದ್ದು ಅವನನ್ನು ಕೊರೆಯಲಾರಂಭಿಸಿತು.

ನಾನು ನನ್ನ ಪಾಡಿಗೆ ಈ ಪಾಕರ್‌ನಲ್ಲಿ ವಾಕ್ ಮಾಡಿದ್ರೆ ಈ ವಯ್ಯನಿಗೇನು ಪ್ರಾಬ್ಲಮ್ಮು? ಎನ್ನುವ ಪ್ರಶ್ನೆಯನ್ನು ತನ್ನೊಳಗೇ ಎಸೆದುಕೊಂಡು ಉತ್ತರ ಅರಸಲಾರಂಭಿಸಿದ.


ಟಿ ಶರ್ಟ್ ಹಾಕಿಕೊಂಡು ಔಟ್ ಶರ್ಟ್ ಮಾಡಿದಾಗಲೆಲ್ಲ ಎದ್ದು ಕಾಣುವ ತನ್ನ ಹೊಟ್ಟೆ ಗಮನಿಸಿಯೇ ಈ ಆಸಾಮಿ ಹೀಗೆಲ್ಲ ಸಲಹೆ ನೀಡುತ್ತಿರಬಹುದೇನೊ ಎಂಬ ಅನುಮಾನವೇ ನಿಜವಿರಬಹುದೆಂಬ ನಿಲುವಿಗೆ ಜೋತು ಬಿದ್ದ ಅವನೊಳಗೆ, ತಾನು ಪ್ರತಿ ದಿನ ಹೀಗೆ ವಾಕಿಂಗ್ ಹೆಸರಿನಲ್ಲಿ ಒಂದರ್ಧ ಗಂಟೆ ನಡೆಯಲಾರಂಭಿಸಿರುವ ಹಿನ್ನೆಲೆ ಮತ್ತು ಮುನ್ನೆಲೆಯಲ್ಲಿ ಇರಬಹುದಾದ ಕಾರಣವಾದರೂ ಏನೆಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವ ಮನಸ್ಸಾಯಿತು.

ಅಪ್ಪನ ಸ್ನೇಹಿತನೆಂಬ ವ್ಯಕ್ತಿ ಅಂದುಕೊಂಡಿರುವಂತೆ ನಾನು ನಡೆಯುವುದು ಹೊಟ್ಟೆ ಕರಗಿಸಿ ಸ್ಲಿಮ್ ಆಗುವ ಸಲುವಾಗಿಯಾ? ಹೀಗೆ ನಡೆಯುವುದರಿಂದ ಆ ಗುರಿ ಸಾಧಿಸಲು ಸಾಧ್ಯವಾ?

ಅವನೊಳಗೇ ಕೇಳಿಕೊಂಡ.

ಒಂದು ಕಾಲದಲ್ಲಿ ಜೀರೊ ಫಿಗರ್ ಆಗಿದ್ದ ತಾನು ಕೇವಲ ಒಂದೆರಡು ವರ್ಷಗಳ ಅವಧಿಯಲ್ಲಿ ಫ್ಯಾಮಿಲಿ ಪ್ಯಾಕ್ ಬೆಳೆಸಿಕೊಂಡು ಡುಮ್ಮ ಎಂದೆನಿಸಿಕೊಳ್ಳಲು ಎಷ್ಟೆಲ್ಲ ಕಾರಣಗಳ ಪಟ್ಟಿ ಮಾಡಬಹುದು? ಸೈಕಲ್ ಬಿಸಾಕಿ ಬೈಕಿನಲ್ಲಿ ಸುತ್ತಲಾರಂಭಿಸಿದ್ದೇ ಇದಕ್ಕೆಲ್ಲ ಕಾರಣವೆಂದು ಜಗತ್ತಿಗೆ ಸಾರಿಕೊಂಡು ಬಂದಿರುವೆನಾದರೂ, ಅದೊಂದೇ ನೆಪಕ್ಕೆ ತೃಪ್ತರಾದವರ ಸಂಖ್ಯೆ ಅತ್ಯಲ್ಪವೆಂಬ ಅರಿವು ಅವನಿಗೂ ಇದೆ. ಬೃಹದಾಕಾರವಾಗಿ ಬೆಳೆಯುತ್ತಿರುವ ಈ ಹೊಟ್ಟೆಯ ಪಾಲಿಗೆ ವೀಕೆಂಡಿನಲ್ಲಿ ಕುಡಿಯುವ ಕೆಎಫ್ ಪ್ರೀಮಿಯಮ್ಮೇ ನೀರು ಗೊಬ್ಬರವೆಂಬ ಮತ್ತೊಂದು ಕಾರಣ ತನ್ನ ಮುಖವನ್ನು ಬಾರ್ ಅಂಡ್ ರೆಸ್ಟೋರೆಂಟ್‌ಗಳ ಬಳಿ ಕಂಡವರಿಗಷ್ಟೆ ಗೊತ್ತಿರಲು ಸಾಧ್ಯವೆಂದುಕೊಂಡು ಸುಮ್ಮನಾದ.

ಅಪ್ಪನ ಸ್ನೇಹಿತನ ಸಲಹೆಯಂತೆ ನಡೆಯುವುದನ್ನು ಬಿಟ್ಟು ಓಡಲಾರಂಭಿಸಲಾ? ಅಷ್ಟಕ್ಕೂ ತಾನು ನಡೆಯುತ್ತಿರುವುದು ಹೊಟ್ಟೆ ಕರಗಿಸಲೆಂದಾ? ಒಂದೆರಡು ವರ್ಷಗಳ ಹಿಂದೆ ಇದ್ದೂ ಇಲ್ಲದಂತಿದ್ದ ಹೊಟ್ಟೆ



ಈಶ್ವರ ಬಡಿಗೇರ